ಹೊಸಕೆರೆಹಳ್ಳಿ ಮೇಲ್ಸೇತುವೆ: ಶೇ 90 ರಷ್ಟು ಪೂರ್ಣ

ಮುಂದಿನ ವಾರ ಪ್ರಾಯೋಗಿಕ ಸಂಚಾರ

- ಪಶ್ಚಿಮ ನಗರ ಪಾಲಿಕೆ ಆಯುಕ್ತ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸಕೆರೆಹಳ್ಳಿ ಕೆರೆಕೋಡಿ ಜಂಕ್ಷನ್‌ನಲ್ಲಿರುವ ಮೇಲ್ಸೇತುವೆಯಲ್ಲಿ ಮುಂದಿನ ವಾರ ವಾಹನಗಳ ಪ್ರಾಯೋಗಿಕ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ. ಕೆ.ವಿ. ರಾಜೇಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮೇಲ್ಸೇತುವೆಯ ಎರಡೂ ಬದಿಯ ಸರ್ವೀಸ್ ರಸ್ತೆಯಲ್ಲಿ ಗುಂಡಿಗಳನ್ನು ಮುಚ್ಚಬೇಕು. ಹಾಳಾದ ಭಾಗಗಳನ್ನು ಕೂಡಲೇ ದುರಸ್ತಿಪಡಿಸಬೇಕು. ಕಟ್ಟಡ ಭಗ್ನಾವಶೇಷ/ತ್ಯಾಜ್ಯವನ್ನು ಸಂಪূರ್ಣವಾಗಿ ತೆರವುಗೊಳಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಹೊಸಕೆರೆಹಳ್ಳಿ ಜಂಕ್ಷನ್‌ನಲ್ಲಿನ 500 ಮೀಟರ್ ಉದ್ದದ ಮೇಲ್ಸೇತುವೆ ಕಾಮಗಾರಿಯ ಶೇ 90 ರಷ್ಟು ಪೂರ್ಣಗೊಂಡಿದ್ದು, ಮೇಲ್ಸೇತುವೆ ಮಧ್ಯಭಾಗದಲ್ಲಿ ಈಗಾಗಲೇ ಡಾಂಬರೀಕರಣ ಮಾಡಲಾಗಿದೆ. ಎರಡೂ ಕಡೆ ವೆಟ್ ಮಿಕ್ಸ್ ಹಾಕಿದ್ದು, ಡಾಂಬರೀಕರಣ ಮಾಡುವ ಕೆಲಸ ಬಾಕಿಯಿದೆ. ಬಣ್ಣ ಬಳಿಯುವ ಕೆಲಸವೂ ಬಹುತೇಕ ಪೂರ್ಣಗೊಂಡಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ತುತ್ತೂರ ಕಾಮಗಾರಿ: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಸ್ವೇಡಿಯಂನಲ್ಲಿ ರಾಜಕಾಲುವೆ ಕಾಮಗಾರಿಯನ್ನು ತುತ್ತೂರಾಗಿ ಪೂರ್ಣಗೊಳಿಸಬೇಕು ಎಂದು ಆಯುಕ್ತ ರಾಜೇಂದ್ರ ಚೋಳನ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಳೆಗಾಲದ ವೇಳೆ ಕಂಠೀರವ ಸ್ವೇಡಿಯಂ ಜಲಾವೃತವಾಗಲಿದ್ದು, ಕ್ರೀಡಾಸಚಟುಗಳಿಗೆ ಅನಾನುಕೂಲ ವಾಗುತ್ತಿದೆ. ಇದನ್ನು ತಪ್ಪಿಸುವ ಸಲುವಾಗಿ ರಾಜಕಾಲುವೆಯ ಕಡೆಗೂಡಿ ಎತ್ತರಿಸುವ ಕಾಮಗಾರಿ ಪ್ರಗತಿಯಲ್ಲಿದೆ. ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಹೇಳಿದರು.

ಅನಧಿಕೃತ ಕಟ್ಟಡಗಳನ್ನು ಗುರುತಿಸಿ, ಪಟ್ಟಿ ಮಾಡಬೇಕು. ಹಂತ-ಹಂತವಾಗಿ ತೆರವುಗೊಳಿಸುವ ಕಾರ್ಯವನ್ನು ಪ್ರಾರಂಭಿಸಬೇಕು. ಕಟ್ಟಡ ಕಟ್ಟುವ ಮುನ್ನವೇ ಯಾವುದೇ ರೀತಿಯ ಉಲ್ಲಂಘನೆ ಮಾಡದಂತೆ ಮನವರಿಕೆ ಮಾಡಿಕೊಡಬೇಕು ಎಂದು ಸೂಚನೆ ನೀಡಿದರು.

ಉತ್ತರ ನಗರ ಪಾಲಿಕೆಯಲ್ಲಿ ತೆರಿಗೆ ವಸೂಲಿ ಅಭಿಯಾನ

ಸುಸ್ತಿದಾರಿಂದ ಆಸ್ತಿತೆರಿಗೆದಾರ ಸಂಗ್ರಹಿಸುವಹಾಗೂ ತಪ್ಪಾಗಿ ಆಸ್ತಿವಿವರ ಪೋಷಣೆ ಮಾಡಿರುವರಿಗೆ ನೋಟಿಸ್ ಜಾರಿ ಮಾಡುವ 'ತೆರಿಗೆ ಅಭಿಯಾನ' ನಾನ್ಯು ಉತ್ತರನಗರ ಪಾಲಿಕೆಯಲ್ಲಿ ಆರಂಭಜೆರಲಾಗಿದೆ.

ಉತ್ತರ ನಗರ ಪಾಲಿಕೆವ್ಯಾಪ್ತಿಯಲ್ಲಿ ಒಟ್ಟು 4,57,951 ಆಸ್ತಿಗಳಿದ್ದು, ಅವುಗಳಲ್ಲಿ ವಸತಿ- 3,36,989, ವಾಣಿಜ್ಯೆತರ- 15,949, ವಸತಿ ಹಾಗೂ ವಾಣಿಜ್ಯೆತರ- 23,214 ಹಾಗೂ ಖಾಲಿ ನಿವೇಶನ- 81,799 ಇವೆ. ಒಟ್ಟು 1,697 ಆಸ್ತಿಗಳಿಗೆ ಕಂದಾಯ ಪರಿಶೀಲನೆ ಆಗತ್ತಿದಿದ್ದು, 78,565 ಆಸ್ತಿಗಳಿಂದ ಕೆಲವು ವರ್ಷಗಳಿಂದ ತೆರಿಗೆ ಬಾಕಿ ಉಳಿದಿದೆ ಎಂದು ಆಯುಕ್ತ ಪ್ರೊಬ್ಬಲಾಸುನೀಲ್ ಕುಮಾರ್ ಹೇಳಿದರು.

2025-26ನೇಸಾಲಿನಲ್ಲಿ ಒಟ್ಟು ₹1,242 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ನಿಗದಿಪಡಿಸಲಾಗಿದೆ. ಈವರೆಗೆ ₹548 ಕೋಟಿ ತೆರಿಗೆ ಸಂಗ್ರಹವಾಗಿದೆ.

ಹೀಗಾಗಿ ಹೆಚ್ಚು ಬಾಕಿ ಉಳಿಸಿಕೊಂಡಿರುವ ಸುಸ್ತಿದಾರರಿಗೆ ನೋಟಿಸ್ ಗಳನ್ನು ಜಾರಿ ಮಾಡಿ, ಬಾಕಿ ಮೊತ್ತವನ್ನು ಪಾವತಿ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕೆಪಿಎಡಿಬಿ ಹಂಚಿಕೆ: ಅರ್ಜಿ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕರ ಬಳಕೆಗಾಗಿ ಮೀಸಲಿಟ್ಟು ಅಭಿವೃದ್ಧಿ ಪಡಿಸಲಾದ ನಾಗರಿಕ ಸೌಲಭ್ಯದ (ಸಿ.ಎ) ನಿವೇಶನಗಳನ್ನು ಕರ್ನಾಟಕ ಕೈಗಾರಿಕಾಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಕಾನೂನು ಬಾಹಿರವಾಗಿ ಖಾಸಗಿ ವ್ಯಕ್ತಿಗಳಿಗೆ ಹಂಚಿಕೆ ಮಾಡಿದೆ' ಎಂದು ಆಕ್ಷೇಪಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಿಲೇವಾರಿ ಮಾಡಿದೆ.

ಈ ಸಂಬಂಧ ದಿನೇಶ್ ಕಲ್ಲಹಳ್ಳಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಾಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ಆಲಿಸಿದ ನ್ಯಾಯಪೀಠ, 'ಅರ್ಜಿದಾರರಿಗೆ ಇದರಿಂದ ವೈಯಕ್ತಿಕ ಸಮಸ್ಯೆ ಏನಾಗಿದೆ' ಎಂದು ಪ್ರಶ್ನಿಸಿತು ಲ್ದರೆ, 'ಅದೊಂದು ಸಾರ್ವಜನಿಕ ಹಿತಾಸಕ್ತಿ ವಿಚಾರ ಒಳಗೊಂಡ ಅರ್ಜಿಯಾಗಿದ್ದು ಪರಿಹಾರ ಕೋರಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಬಹುದು' ಎಂದು ಸೂಚಿಸಿ ವಿಲೇವಾರಿ ಮಾಡಿತು.

ಕೋರಿಕೆ: 'ಸಿ.ಎ ನಿವೇಶನಗಳನ್ನು ಕೆಪಿಎಡಿಬಿ ಖಾಸಗಿ ವ್ಯಕ್ತಿಗಳಿಗೆ ಹಂಚಿಕೆ ಮಾಡುತ್ತಿರುವುದನ್ನು ಆಕ್ಷೇಪಿಸಿರುವ ಮನವಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಚಿಟಿಕೆ ಸುದ್ದಿ

ವಿಭೂತಿಪುರ ಮಠದ ಪ್ರಶಸ್ತಿಗೆ ಆಯ್ಕೆ

ಬೆಂಗಳೂರು: ನಗರದ ವಿಭೂತಿಪುರ ಸಂಸ್ಥಾನ ಮಠವು ನೀಡುವ 2025ನೇ ಸಾಲಿನ ಸುವರ್ಣಶ್ರೀ ರಾಷ್ಟ್ರೀಯ ಪ್ರಶಸ್ತಿ ಹಾಗೂ ಜಾನಪದ ವಿಭೂತಿ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಪೂಜೇ ಪಿ.ಕೃಷ್ಣ

ರಾಜಯ್ಯ

ಬೆಂಗಳೂರು ಗಾಂಧಿಭವನದ ಅಧ್ಯಕ್ಷರಾದ ಪೂಜೇ ಪಿ.ಕೃಷ್ಣ ಅವರನ್ನು 'ಸುವರ್ಣಶ್ರೀ ರಾಷ್ಟ್ರೀಯ ಪ್ರಶಸ್ತಿ'ಗೆ ಹಾಗೂ ಗದಗ ಜಿಲ್ಲೆ ರೋಣ ತಾಲೂಕು ಕೊಡಬಾಳ ಗ್ರಾಮದ ಜೋಗತಿ ನೃತ್ಯ ಕಲಾವಿದ ರಾಜಯ್ಯ ವೀರಭದ್ರಯ್ಯ ಮಠರೋಳ ಅವರನ್ನು 'ಜಾನಪದ ವಿಭೂತಿ ರಾಷ್ಟ್ರೀಯ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ.

ಸುವರ್ಣಶ್ರೀ ರಾಷ್ಟ್ರೀಯ ಪ್ರಶಸ್ತಿಯು ₹50 ಸಾವಿರ, ಫಲಕ ಒಳಗೊಂಡಿದೆ. ನ.17ರಂದು ಮಠದಲ್ಲಿ ನಡೆಯುವ ವೀರಭದ್ರ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಪ್ರದಾನ ಮಾಡಲಾಗುತ್ತದೆ.

ಜಾನಪದ ವಿಭೂತಿ ರಾಷ್ಟ್ರೀಯ ಪ್ರಶಸ್ತಿಯು ₹25 ಸಾವಿರ ನಗದು, ಫಲಕ ಒಳಗೊಂಡಿದೆ. ನ.16ರಂದು ಮಠದಲ್ಲಿ ನಡೆಯುವ ಜಾನಪದೋತ್ಸವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ವಿಭೂತಿಪುರ ಸಂಸ್ಥಾನ ಮಠದ ಕಾರ್ಯದರ್ಶಿ ಸಿ.ಬಸವರಾಜು ಅವರು ತಿಳಿಸಿದ್ದಾರೆ.

ಸಾಂಸ್ಕೃತಿಕ ಮುನ್ನೋಟ

ಹಿಂದೂಸ್ತಾನಿ ಸಂಗೀತ ಜುಗಲ್‌ಬಂದಿ


ನಾಗರಾಜ್ ರಾವ್ ಹವಾಲ್ದಾರ್

ಬೆಂಗಳೂರು: ಬನಶಂಕರಿ 2ನೇ ಹಂತದಲ್ಲಿರುವ ಶ್ರೀರಾಮಲಿಲಿತಕಲಾಮಂದಿರವು ತನ್ನ ಕೇಂದ್ರದಲ್ಲಿ ಇದೇ 8ರಂದು ಸಂಜೆ 5 ಗಂಟೆಗೆ ಹಿಂದೂಸ್ತಾನಿ ಸಂಗೀತ ಜುಗಲ್‌ಬಂದಿ ಹಮ್ಮಿಕೊಂಡಿದೆ.

ಗಾಯನದಲ್ಲಿ ನಾಗರಾಜ್ ರಾವ್ ಹವಾಲ್ದಾರ್, ಓಂಕಾರನಾಥ್ ಹವಾಲ್ದಾರ್ ಭಾಗಹಿಸಿರಿದ್ದಾರೆ. ಹಾರ್ಮೋನಿಯಂನಲ್ಲಿ ಸಮೀರ್ ಹವಾಲ್ದಾರ್ ಮತ್ತು ತಬಲಾದಲ್ಲಿ ಕೇದಾರನಾಥ್ ಹವಾಲ್ದಾರ್ ಸಾಥ್ ನೀಡಲಿದ್ದಾರೆ.

ಸಿಂಧೂರ ನಮನ

ಬೆಂಗಳೂರು: ಶ್ರೀ ಅಕಾಡೆಮಿ ಆಫ್ ಮ್ಯೂಸಿಕ್ ಆ್ಯಂಡ್ ಆರ್ಟ್ ಸಂಸ್ಥೆಯು 'ಆಪರೇಷನ್ ಸಿಂಧೂರ' ಸ್ಮರಣಾರ್ಥ ಇದೇ 8 ಮತ್ತು 9ರಂದು 'ಸಿಂಧೂರ ನಮನ' ಶೀರ್ಷಿಕೆಯಡಿ ಕಲಾವಿದರಿಗೆ ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡಿದೆ.

ಜಯನಗರದ 8ನೇ ಬ್ಲಾಕ್‌ನಲ್ಲಿರುವ ಜಯಚಾಮ ಸೇವಾ ಮಂಡಳಿಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ. 8ರಂದು ಬೆಳಿಗ್ಗೆ 9ಕ್ಕೆ ಕಾಶ್ಮೀರಿ ಸಂಗೀತ ಕಛೇರಿ ನಡೆಯಲಿದೆ. ಮಾಲಿನಿ ಸುಬ್ರಹ್ಮಣ್ಯ (ಗಾಯನ), ಸಿ.ಪಿ. ಶೃತಿ (ವಿಟೆಲಿನ್), ನರೇಂದ್ರಹಸ್ತ ಆರ್. (ಮೃದಂಗ), ಪ್ರಜೇಂದ್ರ ಎನ್.ಎಸ್. (ಘಟ) ಭಾಗವಹಿಸುತ್ತಾರೆ. ಮೊದಲ ದಿನ ನಾಲ್ಕು ಸಂಗೀತ ಕಛೇರಿಗಳು ನಡೆಯಲಿವೆ.

9ರಂದು ಬೆಳಿಗ್ಗೆ 8.30ರಿಂದ ಕಾರ್ಯಕ್ರಮಗಳು ಪ್ರಾರಂಭಗಾಲಿದ್ದು, ಇಡೀ ದಿನ ನಡೆಯಲಿವೆ. ಎರಡು ದಿನಗಳ ಈ ಕಾರ್ಯಕ್ರಮದಲ್ಲಿ ಸಂಗೀತ ಕಛೇರಿ, ವೇದ ಪಾರಾಯಣ, ಹಾಸ್ಯ ಸಂವಾದ, ನೃತ್ತ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಅಲ್ಲದೇ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರನ್ನು ಸನ್ಮಾನಿಸಲಾಗುತ್ತದೆ.

'ಶಬರಾರ್ಜುನ' ಯಕ್ಷಗಾನ

ಬೆಂಗಳೂರು: ಹುಕ್ಕಮಕ್ಕಿಯ ಸಿದ್ಧವಿನಾಯಕ ದುರ್ಗಾಪರಮೇಶ್ವರಾಸ್ ಮಿತ್ರಮಂಡಳಿಯ ಮೇಳದ ಶತಮಾನೋತ್ಸವ ಸಂಭ್ರಮದ ಅಂಗವಾಗಿ ಆನಂದರಾವ್ ಸ್ಮೃತಿದಲ್ಲಿರುವ ಕಪಿಫ್ರಸಿಲಿ ಲೆಕ್ಚಾಧಿಕಾರಿ ಸಂಭ್ರದಲ್ಲಿ ಇದೇ 8ರಂದು ಸಂಜೆ 4 ಗಂಟೆಗೆ 'ಶಬರಾರ್ಜುನ' ಯಕ್ಷಗಾನ ಪ್ರದರ್ಶನ ಹಮ್ಮಿಕೊಂಡಿದೆ.

ಹಿಮ್ಮೇಳದಲ್ಲಿ ಪ್ರಸನ್ನ ಹೆಗಡೆ, ನಂದನ ಹೆಗಡೆ ದಂಟ್ಲಳೆ, ನಾರಾಯಣ ಹೆಬ್ಬಾರ್, ಅಮ್ರಶರೆವ ಪಾಲೊಳ್ಳಲಿದ್ದಾರೆ. ಮುಮ್ಮೇಳದಲ್ಲಿ ಶ್ರೀಹರಿ ಹೆಗಡೆ ಶುಂಠಿ, ರಾಘಾಕ್ಷಸ್ಥ ಬೆಳಿಯೂರು, ರವಿ ಮಡೋಡಿ, ಅರಿತ್ ಹಲ್ಲೂಡೆ, ಕಾರ್ತಿಕ್ ದಂಡ್ಲಳ್ ಹಾಗೂ ಅವಿನಾಶ್ ಭಾಗವತೆಸಲಿದ್ದಾರೆ. ಪ್ರವೇಶ ಉಚಿತ ಇರಲಿದೆ.

ನೃತ್ಯ ರೂಪಕ ಪ್ರದರ್ಶನ

ಬೆಂಗಳೂರು: ಕಲಾಶ್ರಿತಿ ಕಲಾ ಸಂಸ್ಥೆಯು ಇದೇ 7ರಂದು ಸಂಜೆ 5.30ಕ್ಕೆ ಜಯನಗರದ ಜೆ.ಎಸ್.ಎಸ್. ಸಭಾಂಗಣದಲ್ಲಿ 'ಚಿತ್ರಕೂಟೇ ಧರ್ಮಸೃಭವಂ' ನೃತ್ಯರೂಪಕ ಪ್ರದರ್ಶನ ಹಮ್ಮಿಕೊಂಡಿದೆ.

ಇದು ವಾಲ್ಮೀಕಿ ರಾಮಾಯಣ ಆಧರಿಸಿದ್ದು, ಎಂ.ಆರ್. ಕೃಷ್ಣಮೂರ್ತಿ ಮತ್ತು ಎ. ಜನಾರ್ದನನ್ ಅವರು ನಿರ್ದೇಶಿಸಿದ್ದಾರೆ. ಕೆ. ಹರಿಪ್ರಸಾದ್ ಅವರು ಸಂಗೀತ ಸಂಯೋಜಿಸಿದ್ದಾರೆ.

ಕಾರ್ತಿಕ ಸಂಗೀತ ಸಂಭ್ರಮ

ಬೆಂಗಳೂರು: ನಾದಜ್ಯೋತಿ ಸಂಗೀತ ಸಭಾಟ್ರಸ್ಟ್ ವತಿಯಿಂದ ಶ್ರೀನಾಮ ಮಂದಿರದಲ್ಲಿ ಕಾರ್ತಿಕ ಸಂಗೀತ ಸಂಭ್ರಮ, ಕನಕದಾಸರ ಜಯಂತಿ, ಕರ್ನಾಟಕ ರಾಜ್ಯೋತ್ಸವ, ಹರಿದಾಸ ಸಂಭ್ರಮ ಮತ್ತು ಅನ್ನಮಾಚಾರ್ಯ ಸಂಭ್ರದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಇದೇ 7ರಂದು ಸಂಜೆ 6 ಗಂಟೆಗೆ ಎಸ್.ಸಿ. ಶರ್ಮ ಅವರಿಂದ ಗಾಯನ ನಡೆಯಲಿದೆ. ಅನಂತ ಪದ್ಮನಾಭ (ವಿಟೆಲಿನ್), ಸಿ. ಚೆಲುವರಾಜ್ (ಮೃದಂಗ), ಎನ್. ಗುರುಮೂರ್ತಿ (ಘಟ) ಹಾಗೂ ಮೇಲುಕೋಟೆ ಶ್ರೀನಿವಾಸ್ (ಮೋರ್ಸಿಂಗ್) ಅವರು ಸಾಥ್ ನೀಡಲಿದ್ದಾರೆ. 8ರಂದು ಪ್ರಗಲ್ಭ ಆರ್.ಎಸ್. ಅವರಿಂದ ಗಾಯನ ನಡೆಯಲಿದ್ದು, ಕಶ್ಯಪ್ ಶಂಕರ್ (ಸಹ ಗಾಯನ), ವಿಘ್ನೇಂದ್ರ ಸಿಂಹ ಜೆ.ಜಿ. (ವಿಟೆಲಿನ್) ಹಾಗೂ ನಿಶ್ಚಿತ್ ಟಿ.ಆರ್. (ಮೃದಂಗ) ಸಾಥ್ ನೀಡಲಿದ್ದಾರೆ.

9ರಂದು ಸಂಜೆ 5 ಗಂಟೆಯಿಂದ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ ಅವರು ಹರಿದಾಸ ರೂಪಕವನ್ನು ನಿರೂಪಿಸಲಿದ್ದಾರೆ. ಬಳಿಕ ಅರುಣಿ ಶ್ರೀರಾಮ್ ಅವರಿಂದ ಗಾಯನ ನಡೆಯಲಿದೆ. ಆರ್. ಅಶ್ವತ್ಥನಾರಾಯಣ (ವಿಟೆಲಿನ್), ಎಸ್.ಪಿ. ನಾಗೇಂದ್ರ ಪ್ರಸಾದ್ (ಮೃದಂಗ) ಸಾಥ್ ನೀಡಲಿದ್ದಾರೆ.

ಕೆ.ಕೆ.ಮೂರ್ತಿ ಸ್ಮಾರಕ ಸಂಗೀತೋತ್ಸವ

ಎಲ್.ಸುಬ್ರಮಣ್ಯಂ

ಬೆಂಗಳೂರು: ಅಕಾಡೆಮಿ ಆಫ್ ಮ್ಯೂಸಿಕ್ ಬೌಂಡಯ್ಯ ಸ್ಮಾರಕ ಭವನದಲ್ಲಿ ಕೆ.ಕೆ.ಮೂರ್ತಿ ಸ್ಮಾರಕ ಸಂಗೀತ ಉತ್ಸವ ಹಮ್ಮಿಕೊಂಡಿದೆ.

'ಇದೇ ಶುಕ್ರವಾರ ಸಂಜೆ 7 ಗಂಟೆಗೆ ವಿಶಾಖಾ ಹರಿ ಅವರಿಂದ ಸಂಗೀತ ತ್ರಿಮೂರ್ತಿಗಳ ಬಗ್ಗೆ ಹರಿಕಥೆ ನಡೆಯಲಿದೆ. ಶನಿವಾರ ಸಂಜೆ 7 ಗಂಟೆಗೆ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸುರೇಶ್ ಬಾಬಷ್, ನೂರುಲ್ಲಾ ಗಾಸಿಲ್, ಅನುಜಾ ಜೊಶಾಕರ್, ಕೇದಾರ್ ಕೆಲ್ಕರ್ ಪಾಲೊಳ್ಳಲಿದ್ದಾರೆ. ಭಾನುವಾರ ಸಂಜೆ 6 ಗಂಟೆಯಿಂದ ಪ್ರಶಸ್ತಿ ಪ್ರದಾನ ಹಾಗೂ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಎಲ್. ಸುಬ್ರಮಣ್ಯಂ ಮತ್ತು ಕಂಡಮಿಂದ ಸಂಗೀತ ಕಛೇರಿ ನಡೆಯಲಿದೆ.

ಪ್ರತಿ ಗುರುವಾರ ಪ್ರಕಟವಾಗುವ 'ಸಾಂಸ್ಕೃತಿಕ ಮುನ್ನೋಟ' ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

ಕೆರೆಗಳಿಗೆ ಸಂಸ್ಕರಿಸದ ನೀರು ಅಪಾಯ: ಮಂಜುನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನ ಕೊಳೆತ ನೀರನ್ನು ಸರಿಯಾಗಿ ಸಂಸ್ಕರಿಸದೇ ಕೋಲಾರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಆನೇಕಲ್‌ಗೆ ಭಾಗದ ಕೆರೆಗಳಿಗೆ ಹರಿಸುತ್ತಿರುವುದರಿಂದ ಮಾಲಿನ್ಯದ ಜತೆಗೆ ಈ ಭಾಗದ ಜನರಲ್ಲಿ ರೋಗಗಳಿಗೆ ದಾರಿ ಮಾಡಿಕೊಡಲಿದೆ' ಎಂದು ಬೆಂಗಳೂರು ಗ್ರಾಮಾಂತರ ಸಂಸದ ಡಾ.ಸಿ.ಎನ್.ಮಂಜುನಾಥ್ ಕಳವಳ ವ್ಯಕ್ತಪಡಿಸಿದರು.

ಗ್ರೀನ್ ಸ್ಕಿಲ್ಸ್ ಅಕಾಡೆಮಿ ಹಾಗೂ ಸಂಚಾರ್ ಫಾರ್ ಸ್ಟೇನಬಲ್ ಡೆವಲಪ್‌ಮೆಂಟ್ (ಸಿಎಸ್‌ಡಿ) ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ಇನೆಕ್ ವಾಟರ್ ಸುಸ್ಥಿರ ನಾಯಕತ್ವ ಶೃಂಗಭೆಯಲ್ಲಿ ಅವರು ಮಾತನಾಡಿದರು.

'ಕೊಳೆತ ನೀರನ್ನು ಸಂಪೂರ್ಣ ಸಂಸ್ಕರಣೆ ಮಾಡಿದ ಬಳಿಕವೇ ಕೆರೆಗಳಿಗೆ ಇಳುವೇ ಅಂತರ್ಜಲ ವೃದ್ಧಿಗೆ ಬಳಸಬೇಕು ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ನಿಯಮ ರೂಪಿಸಿದೆ. ಆದರೆ, ಸರಿಯಾಗಿ ಸಂಸ್ಕರಣೆ ಮಾಡದೇ ನೀರು ಹರಿಸುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿವೆ. ಈ ಭಾಗದಲ್ಲಿ ನೀಲಿನ ರುಚಿ, ವಾಸನೆ ಕೂಡ ಭಿನ್ನವಾಗಿದೆ. ಎಳನೀರು ಕೂಡ ಭಿನ್ನರುಚಿಗೆ ತಿರುಗಿದೆ. ಇದರ ಬಳಕೆ ಕ್ಯಾನ್ಸರ್, ಚರ್ಮರೋಗಗ ಉಲ್ಬಣಕ್ಕೂ ದಾರಿ ಮಾಡಿಕೊಡಬಹುದು' ಎಂದು ಹೇಳಿದರು.

'ನಗರ ಪ್ರದೇಶಗಳಲ್ಲಿ ಮಾಲಿನ್ಯ ಪ್ರಮಾಣ ಮಿತಿ ಮೀರುತ್ತಿದೆ. ಅತಿಯಾದ ಕಾಮಗಾರಿ, ವಾಹನಗಳ ದಟ್ಟಣೆ, ಹಸಿರು ಪ್ರಮಾಣದಲ್ಲಿ ಇಳಿಕೆಯಿಂದಾಗಿ ಮಾಲಿನ್ಯ ಹೆಚ್ಚಿ ಇದರ ಪರಿಣಾಮ ಜನರ ಮೇಲೆ ಬೀರುತ್ತಿದೆ. ದೂಳಿನ ಕಣಗಳು ದೇಹದೊಳಕ್ಕೆ ಸೇರಿ ಹೃದಯಾಘಾತ, ಪಾರ್ಶ್ವವಾಯು, ಶ್ವಾಸಕೋಶ ಸಂಬಂಧಿ ಕಾಯಿಲೆಗಳ ಹೆಚ್ಚಳಕ್ಕೂ ದಾರಿ ಮಾಡಿಕೊಡುತ್ತಿದೆ' ಎಂದರು.

ಶೃಂಗಸಭೆಯಲ್ಲಿ ಸಿಎಸ್‌ಡಿ ಅಧ್ಯಕ್ಷ ಎ.ರವೀಂದ್ರ ಮತ್ತು ಸಂಸದ ಡಾ.ಸಿ.ಎನ್ ಮಂಜುನಾಥ್ ಸಮಾಲೋಚನೆಯಲ್ಲಿ ತೊಡಗಿದ್ದರು.ಉಪೇಂದ್ರ ತ್ರಿಪಾಠಿ, ಶ್ರೀನಿವಾಸುಲು ಮತ್ತು ಜೈರಾಜ್ ಇದ್ದರು.

ಪ್ರಜಾವಾಣಿ ಚಿತ್ರ

'ಪ್ರತಿಯೊಬ್ಬರೂ ಶುದ್ಧ ಆಹಾರ, ಗಾಳಿ, ನೀರು ಪಡೆಯಲೇಬೇಕು. ಇಗ ಮಾತ್ರಅಲ್ಲೋಗ್ಯಯತೇದೆನನ ನಡೆಸಲು ಸಾಧ್ಯವಿದೆ. ನವೀಕರಿಸಬಲ್ಲ ಇಂಧನ ಉತ್ಪಾದನೆಗೆ ಕೇಂದ್ರ ಸರ್ಕಾರ ಕಳೆದ ಬಜೆಟ್‌ನಲ್ಲಿ ₹26,500 ಕೋಟಿ ಮೀಸಲಿರಿಸಿದೆ. ಚೀನಾದಂತೆ ಭಾರತದಲ್ಲಿ ಕೂಡ ಇದಕ್ಕಾಗಿ ಸ್ವತ್ರದಾದ ನೀತಿ ಜಾರಿ ಮಾಡಬೇಕು' ಎಂದು ಸಲಹೆ ನೀಡಿದರು.

ನಿವೃತ್ತ ಮುಖ್ಯ ಕಾರ್ಯದರ್ಶಿ ಎ.ರವೀಂದ್ರ ಮಾತನ